ವಿಭಾಗೀಯ ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಹಾಗೂ ಪದನಿಮಿತ್ತ ಜಂಟಿನಿರ್ದೇಶಕರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು-24

ಸಂಖ್ಯೆ: ಜಿ12/ಪ್ರೌ.ಶಾ.ಶಿ.ವರ್ಗಾ.01/2012-13

ದಿನಾಂಕ: 08-05-2012

ಗೆ,
ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,
ಮೈಸೂರು/ಚಾಮರಾಜನಗರ/ಮಂಡ್ಯ/ಹಾಸನ
ಚಿಕ್ಕಮಗಳೂರು/ಕೊಡಗು/ದಕ್ಷಿಣ ಕನ್ನಡ ಮತ್ತು ಉಡುಪಿ.

ವಿಷಯ: ಮೈಸೂರು ವಿಭಾಗ ಮಟ್ಟದ ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ಘಟಕದ ಒಳಗಿನ ವರ್ಗಾವಣೆ ಕೌನ್ಸಿಲಿಂಗ್‌ಗೆ ಹಾಜರಾಗುವಂತೆ ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡುವ ಬಗ್ಗೆ.

ಉಲ್ಲೇಖ: ಮಾನ್ಯ ಆಯುಕ್ತರ ಜ್ಞಾಪನ ಸಂಖ್ಯೆ ಸಿ4(7)ಪ್ರೌ.ಶಿ/ಮಾ.ಹ.ಅ/ವರ್ಗ/01/12-13, ದಿನಾಂಕ 03-05-2012.

::::::::::::::::::::::

2012-13ನೇ ಸಾಲಿನ ಮೈಸೂರು ವಿಭಾಗ ಮಟ್ಟದ ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ಘಟಕದ ಒಳಗಿನ ವರ್ಗಾವಣೆ ಕೋರಿರುವ ಶಿಕ್ಷಕರ ಅಂತಿಮ ಆದ್ಯತಾ ಪಟ್ಟಿಯನ್ನು ದಿನಾಂಕ 09-05-2012ರಂದು ಇಲಾಖೆಯ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು. ಅಂತಿಮ ಆದ್ಯತಾ ಪಟ್ಟಿಯನ್ನು ಆಧರಿಸಿ ಕೌನ್ಸಿಲಿಂಗ್ ಕಾರ್ಯಕ್ರಮವನ್ನು ದಿನಾಂಕ 10-05-2012 ರಿಂದ 15-05-2012ರವರೆಗೆ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿನಿರ್ದೇಶಕರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಡಿ. ಸುಬ್ಬಯ್ಯ ರಸ್ತೆ, ಮೈಸೂರು ಇಲ್ಲಿ ಬೆಳಿಗ್ಗೆ 10-00 ಗಂಟೆಯಿಂದ ಈ ಕೆಳಕಂಡ ವೇಳಾಪಟ್ಟಿಯಂತೆ ನಡೆಸಲಾಗುವುದು.

ಸದರಿ ವಿಚಾರವನ್ನು ತಮ್ಮ ಜಿಲ್ಲೆಯಲ್ಲಿ ಅಧಿಕ ಪ್ರಸಾರವುಳ್ಳ ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳುವುದು ಹಾಗೂ ವೇಳಾಪಟ್ಟಿಯನ್ನು ಕಚೇರಿಯ ಸೂಚನ ಫಲಕಗಳಲ್ಲಿ (ನಾಲ್ಕಾರು ಕಡೆ) ಪ್ರಕಟಿಸಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಲು ತಿಳಿಸಿದೆ.

ಕೌನ್ಸಿಲಿಂಗ್‌ಗೆ ಹಾಜರಾಗುವ ಸಂದರ್ಭದಲ್ಲಿ ಶಿಕ್ಷಕರು ಸೇವಾ ಪ್ರಮಾಣ ಪತ್ರ, ಗುರುತಿನ ಪತ್ರ ಮತ್ತು ಆದ್ಯತೆಯ ಮೂಲ ಪ್ರಮಾಣ ಪತ್ರಗಳೊಡನೆ ತಪ್ಪದೇ ಹಾಜರಾಗುವಂತೆ ಸೂಚನೆ ನೀಡುವುದು.

**ಕೌನ್ಸಿಲಿಂಗ್ ಕಾರ್ಯಕ್ರಮದ ವೇಳಾಪಟ್ಟಿ**

| ಕ್ರ.ಸಂ. | ದಿನಾಂಕ | ಕೌನ್ಸಿಲಿಂಗ್‌ಗೆ ಹಾಜರಾಗಬೇಕಾದ ಶಿಕ್ಷಕರ ಆದ್ಯತಾ ಕ್ರಮ ಸಂಖ್ಯೆ |
|---|---|---|
| 01 | 10-05-2012 | 01 ರಿಂದ 200 |
| 02 | 11-05-2012 | 201 ರಿಂದ 450 |
| 03 | 12-05-2012 | 451 ರಿಂದ 700 |
| 04 | 13-05-2012 | 701 ರಿಂದ 950 |
| 05 | 14-05-2012 | 951 ರಿಂದ 1200 |
| 06 | 15-05-2012 | 1201 ರಿಂದ ಕೊನೆಯವರೆಗೆ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ವಿಶೇಷ ಶಿಕ್ಷಕರು. |

(ಕೆ. ಆನಂದ್)
ವಿಭಾಗೀಯ ಕಾರ್ಯದರ್ಶಿಗಳು ಹಾಗೂ
ಪದನಿಮಿತ್ತ ಜಂಟಿನಿರ್ದೇಶಕರು,
ಮೈಸೂರು ವಿಭಾಗ, ಮೈಸೂರು.

- 574 -F:\JDP3- Data\E Drive\SR\G12 ENG\G12.doc